<u>**ಕರ್ನಾಟಕ ವಿಧಾನ ಪರಿಷತ್ತು**</u>

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1045
**ಸದಸ್ಯರ ಹೆಸರು** : ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು)
**ಉತ್ತರಿಸುವ ಸಚಿವರು** : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
**ಉತ್ತರಿಸಬೇಕಾದ ದಿನಾಂಕ** : 24.02.2023

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ಕಬ್ಬನ್ ಪಾರ್ಕ್‌ನ ಒಟ್ಟು ಭೂ ವಿಸ್ತೀರ್ಣ ಎಷ್ಟು: | ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನವು ಒಟ್ಟು 197 ಎಕರೆ 31.50 ಗುಂಟೆಗಳ ವಿಸ್ತೀರ್ಣ ಹೊಂದಿದೆ |
| ಆ) | ಸರ್ಕಾರವು ಎಷ್ಟು ಎಕರೆ ಪ್ರದೇಶವನ್ನು ವಿವಿಧ ಉದ್ದೇಶಗಳಿಗೆ/ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿದೆ: (ಸಂಪೂರ್ಣ ವಿವರವನ್ನು ಒದಗಿಸುವುದು) | ತೋಟಗಾರಿಕೆ ಇಲಾಖೆಯ ವತಿಯಿಂದ ಈ ಕೆಳಕಂಡ ಇಲಾಖೆಗಳು/ಸಂಸ್ಥೆಗಳಿಗೆ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಲಾಗಿದೆ.<br><u>**I) ಕರ್ನಾಟಕ ಸ್ಟೇಟ್ ಲಾನ್ ಟೆನ್ನೀಸ್ ಅಸೋಸಿಯೇಷನ್:**</u><br>1) ಕರ್ನಾಟಕ ಸ್ಟೇಟ್ ಲಾನ್ ಟೆನ್ನೀಸ್ ಅಸೋಸಿಯೇಷನ್: ಸರ್ಕಾರದ ಆದೇಶ ಸಂಖ್ಯೆ: No:AHD 18 AHM 83, ಬೆಂಗಳೂರು, ದಿನಾಂಕ:31-11-2001 ರಂತೆ ಕರ್ನಾಟಕ ಲಾನ್ ಟೆನ್ನೀಸ್ ಅಸೋಸಿಯೇಷನ್ ಗೆ ದಿನಾಂಕ:24-08-2001 ರಿಂದ ದಿನಾಂಕ:23-08-2026 ರವರೆಗೆ ವಾರ್ಷಿಕ ರೂ.20,000/- ದಂತೆ ದರ ನಿಗದಿ ಪಡಿಸಿ 25 ವರ್ಷಗಳ ಅವಧಿಗೆ ಲೀಸ್ ನೀಡಲಾಗಿದೆ.<br>2) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: No: HCD 515 HGM 2014 ಬೆಂಗಳೂರು Dated: 05-11-2015 ರಂತೆ ಕರ್ನಾಟಕ ಸ್ಟೇಟ್ ಲಾನ್ ಟೆನ್ನೀಸ್ ಅಸೋಸಿಯೇಷನ್ ಒಟ್ಟು 2 ಎಕರೆ 06 ಗುಂಟೆ (8688.94 ಚ.ಮೀ) ವಿಸ್ತೀರ್ಣದ ಜಾಗವನ್ನು ಹೊಂದಿರುತ್ತದೆ.<br>**II) ಬಾಲಭವನ:**<br>1) ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್, ವಿಧಾನಸೌಧ ಯೂನಿಟ್ ಗಾರ್ಡನ್, ಕಬ್ಬನ್ ಪಾರ್ಕ್, ಬೆಂಗಳೂರು ರವರ ಪತ್ರ ಸಂಖ್ಯೆ: JPD/GL/340/81-81 Dated: 05-08-1981 ರಂತೆ ಬಾಲಭವನದ ಚಟುವಟಿಕೆಗಳಿಗೆ ಜಮೀನನ್ನು ನೀಡಲಾಗಿದ್ದು, ಈ ಜಮೀನಿನ ಮಾಲೀಕತ್ವವು ತೋಟಗಾರಿಕೆ ಇಲಾಖೆ ಕರ್ನಾಟಕ ಸರ್ಕಾರ ಅಧೀನದಲ್ಲಿ ಇರುತ್ತದೆ.<br>2) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: No: HCD 515 HGM 2014 ಬೆಂಗಳೂರು Dated:05-11-2015 ರಂತೆ ಬಾಲಭವನವು 11 ಎಕರೆ 14 ಗುಂಟೆಗಳು (45928.10 ಚ.ಮೀ.) ವಿಸ್ತೀರ್ಣದ ಜಾಗವನ್ನು ಹೊಂದಿರುತ್ತದೆ. |
| ಇ) | ಕಬ್ಬನ್ ಪಾರ್ಕ್ ಗೆ ಹೊಂದಿ | ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ |

<table>
<tr><td></td><td>ಕೊಂಡಂತ್ತಿರುವ ಸರ್ಕಾರದ ಕೆಲವು ಇಲಾಖೆಗಳು ವಾಣಿಜ್ಯ ಮಳಿಗೆಗಳನ್ನು ತೆರೆಯುತ್ತಿರುವುದರಿಂದ ಜನಸಂದಣಿ ಹೆಚ್ಚಾಗಿ ಕಬ್ಬನ್ ಪಾರ್ಕ್ ನಲ್ಲಿನ ಪಕ್ಷಿ ಸಂಕುಲಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="2">ಸರಹದ್ದಿನಿಂದ ಹೊರಗಿಡಲ್ಪಾದ ಕಟ್ಟಡಗಳ ನವೀಕರಣ/ಮಾರ್ಪಾಡು ಕಾರ್ಯಗಳ ನಿಯಂತ್ರಣ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ತೋಇ:515: ತೋಇವಿ:2014 ಬೆಂಗಳೂರು ದಿನಾಂಕ: 05-11-2015 ರಂತೆ ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ ವ್ಯಾಪ್ತಿಯ ಹೊರಗುಳಿಯುವ ಸರ್ಕಾರಿ/ಖಾಸಗಿ ಕಟ್ಟಡಗಳಿಗೆ ಮಾರ್ಪಾಡು/ನವೀಕರಣ ಮಾಡಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿದ್ದು, ಈ ಸಮಿತಿಯು ಪ್ರಸ್ತಾವನೆಗಳ ಪರಿಶೀಲನೆ ಕಾರ್ಯವನ್ನು ಕೈಗೊಳ್ಳುತ್ತದೆ.</td></tr>
<tr><td>ಈ)</td><td>ಬಂದಿದ್ದಲ್ಲಿ ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td></tr>
<tr><td>ಉ)</td><td>ಉದ್ಯಾನ ನಗರಿ ಎಂದು ಪ್ರಸಿದ್ಧ ಹೊಂದಿರುವ ಬೆಂಗಳೂರು ನಗರದಲ್ಲಿ ಹಸಿರು ಮಾಯವಾಗಿ ಬರೀ ನಗರೀಕರಣಕ್ಕೆ ಆಸ್ಪದ ನೀಡುವುದರಿಂದ ಪ್ರಾಣಿ ಮತ್ತು ಪಕ್ಷಿ ಸಂಕುಲದ ಪ್ರಭೇದಗಳಿಗೆ ಮಾರಕವಾಗುತ್ತಿರುವ ಕುರಿತು ಸರ್ಕಾರದ ರೂಪುರೇಷೆಗಳೇನು? (ಸಂಪೂರ್ಣ ವರದಿಯನ್ನು ನೀಡುವುದು)</td><td>• ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನದ ಆವರಣದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ವಾಯು ಮಾಲಿನ್ಯ ತಡೆಗಟ್ಟುವ ಹಿನ್ನೆಲೆಯಲ್ಲಿ ಪೊಲೀಸ್ ಕಮೀಷನರ್, ಬೆಂಗಳೂರು ನಗರ ರವರ ಅಧಿಸೂಚನೆ ದಿನಾಂಕ:10-01-2020 ರಂತೆ ಕಬ್ಬನ್ ಉದ್ಯಾನವನದ ಒಳ ರಸ್ತೆಗಳಲ್ಲಿ ಪ್ರತಿ ಭಾನುವಾರಗಳಂದು, ಪ್ರತಿ ಮಾಹೆಯ 2 ನೇ ಶನಿವಾರ ಮತ್ತು 4 ನೇ ಶನಿವಾರ, ಸಾರ್ವಜನಿಕ ರಜಾ ದಿನಗಳಂದು ಹಾಗೂ ರಾಷ್ಟ್ರೀಯ ಹಬ್ಬಗಳಂದು (ಜನವರಿ-26, ಆಗಸ್ಟ್-15 ಮತ್ತು ಅಕ್ಟೋಬರ್-2) ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.<br>• ಪ್ಲಾಸ್ಟಿಕ್ ನ್ನು ನಿಷೇಧಿಸಲಾಗಿದೆ.<br>• ಕೊಳಚೆ ನೀರಿನ ಸಂಸ್ಕರಣ ಘಟಕಗಳನ್ನುನಿರ್ಮಿಸಲಾಗಿದೆ.<br>• ಸಾರ್ವಜನಿಕ ಸಭೆಗಳನ್ನು ನಿಷೇಧಿಸಲಾಗಿದೆ.<br>• ದಿನಾಂಕ:15-01-2020 ರಂತೆ ಪೊಲೀಸ್ ಕಮೀಷನರ್, ಬೆಂಗಳೂರು ನಗರ ರವರ ಅಧಿಸೂಚನೆಯಲ್ಲಿ ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನದ ಒಳ ರಸ್ತೆಗಳಲ್ಲಿ ನಿಶ್ಯಬ್ದ ವಲಯವೆಂದು ಅಧಿಸೂಚಿಸಲಾಗಿದೆ. ಅದರಂತೆ ಉದ್ಯಾನವನದ ಆಯ್ದ ಪ್ರದೇಶಗಳಲ್ಲಿ ನಿಶ್ಯಬ್ದ ವಲಯದ ನಾಮಫಲಕವನ್ನು ಅಳವಡಿಸಲಾಗಿದೆ.</td></tr>
</table>

**HORTI 113 HGM 2023**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು